ಷರತ್ತುಗಳು—ಸರ್ಕಾರದ ಹರಾಜ್ ಖೈದಾದ ಕೂಡ್ಲೆ ಜಡ ದರಖಾಸ್ತುದಾರನು ಹರಾಜು ಮೊಬಲಗಿನ ಮೇಲೆ ಕೇಕಡಾ 25 ರೂ ಪಾಯಿ ಕೇವಣಿಯನ್ನು ಪಾವತಿ ಮಾಡತಕ್ಕದ್ದು, ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಪಾವತಿ ಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಕೇವಣಿ ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳಲಾಗುತ್ತೆ, ಮತ್ತು ಸದರೀ ಆನೆಗಳು ಪುನಹ ಹರಾಜು ಮಾಡುವದರಲ್ಲಿ ಯುಂಟಾಗ ಬಹುಪಾದ ಲುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ, ನಫೆ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲ. ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾಜ್ ತಾರೀಖು ಲಾಗಾಯತು ತಗಲುವ ಖರ್ಚು ವಹಿಸಬೇಕು.

ಬಿ. ರಾಮಸ್ವಾಮಯ್ಯಂಗಾರ್,
ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮಿಸರ್ಹೇಟಕ್.

ಹಾಸನ ಡಿಸ್ಟ್ರಿಕ್ಟು.

ಸ್ ೧೮೯೦ನೇ ಇಸವಿ 21ನೇ ಏಪ್ರೆಲ್.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಹಾಸನ ಡಿಸ್ಟ್ರಿಕ್ಟು ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕು ದಾರಿಯು ಚನ್ನರಾಯಪಟ್ಟಣದ ತಾಲ್ಲೂಕು ಕಚ್ಚೇರಿಮುಲ್ಲಿ ಸ್ ೧೮೯೦ನೇ ಇಸವಿ ಮೇ ತಾರೀಖು 19ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಅಮಲ್ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುವರು.

3. ಈ ಹರಾಜಿನ ಜಡ ದರಖಾಸ್ತು ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷ್ಶನರವರಿಂದ ಮಂಜೂರ್ಮಾಡುವ ಪರಿಯಂತ ಖಾಯಮಾದ್ದಾಗಿ ತಿಳದುಕೊಳ್ಳ ಕೂಡದು.

4. ಈ ಇಜಾರೆಯು ಸ್ ೧೮೯೧ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ತರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಯಿಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮಿಷ್ಶನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದ ವಳಗಾಗಿ ಕ್ರಯದ ವಟ್ಟು ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಆಗುವ ಲೋಕಲ್ಸೆಸ್ ದೇ ಖೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

(a) ಹಿಡುವಳಿ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಮ್ಮತಿಯನ್ನ ಪಡಿಯಬೇಕು, ಜಮೀನು ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು ಇಜಾರೆದಾರನಿಗೆ ಮಾರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂ ಕೂಡದು.

(b) ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರರ ಜಕಾವು ಹಕ್ಕಿನಲ್ಲಿ ಪ್ರವೇಶಿಸ ಕೂಡದು.

(c) ಬಂಜರ್ ಜಮೀನುಗಳು ಸಾಗುವಳಿ ಬಗ್ಗೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳ ಕೂಡದು, ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರೆದಾರನಿಗೆ ವುಳಿದಿರುತ್ತೆ.

(d) ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನು ಅಗಿಯಕೂಡದು. ಬಂದು ವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿ ಬಿಟ್ಟು ಸಾಗುವಳಿಗೆ ಜಮೀನು ಲಾಯಕ್ಕು ಯಿರುವ ಹಾಗೆ ಮಾಡಬೇಕು.

ಸಿ. ಮಾದಯ್ಯ,
ಡೆಪ್ಯೂಟಿ ಕಮಿಷನರ್.

ಪ್ರಸಿದ್ಧಪತ್ರಿಕೆ.

ಈ ಕೆಳಗೆ ರುಜು ಮಾಡುವ ಕೇಳವಯ್ಯನಾದ ನಾನು—ಮೈಸೂರು ಸಾಹುಕಾರ ಚಿಕ್ಕ ಮಲ್ಲಯ್ಯನವರ ಬಾಬತು ಚಿಕ್ಕ ಅಂಗಡಿಗೆ ಸಂಬಂಧಪಟ್ಟ ಜೆಂಗಳೂರು ತರಗುಮಂಡಿಯಲ್ಲಿ ಸದರೀ ಚಿಕ್ಕ ಮಲ್ಲಯ್ಯನವರ ಪಾಲ್ದಾರನಾಗಿ ಭೂಸಾ ವ್ಯಾಪಾರವನ್ನು ಮಾಡುತ್ತಾ ಯಿದ್ದು ಈಚಿಗೆ ಸದರೀ ಪಾಲು ವ್ಯಾಪಾರ ಮತ್ತು ಅದಕ್ಕೆ ಸಂಬಂಧಪಟ್ಟ ವಿಶಿಷ್ಟ ಲೇಣಿ ದೇಣಿಯನ್ನೂ ಸಹ ಸದರೀ ಚಿಕ್ಕ ಮಲ್ಲಯ್ಯನವರಿಗೆ ಹರಾಜು ಮೂಲಕ ವಹಿಸಿಕೊಟ್ಟು ಪಾಲು ವ್ಯಾಪಾರಕ್ಕೆ ಸಂಬಂಧಪಟ್ಟ ವಿಶಿಷ್ಟ ಲೆಕ್ಕ ಪತ್ರಗಳನ್ನೂ ಸದರೀಯವರ ಸುಪರ್ದು ಮಾಡಿಯಿರುತ್ತೆಯಾಗಿ ಯಿಲ್ಲಿಂದ ಮುಂದೆ ಸದರೀ ಪಾಲು ವ್ಯಾಪಾರಕ್ಕೆ ಬರಬೇಕಾದ ಲೇಣಿ ಮತ್ತು ಕೊಡಬೇಕಾದ ದೇಣಿಗೆ ಸಹ ಸದರೀ

334

ಚಿಕ್ಕ ಮಲ್ಲಯ್ಯನವರೇ ಹಕ್ಕುದಾರರಾಗಿ ಯಿರುತ್ತಾರೆಯೇ ಹೊರತು ಸದರೀ ಸಾಲು ವ್ಯಾಪಾರದಲ್ಲಿ ನನಿಗೆ ಯಾವ ಹಕ್ಕೂ ಇರುವದಿಲ್ಲವೆಂದು ಇದರಿಂದ ಪ್ರಸಿದ್ಧಪಡಿಸಿ ಯಿರುತ್ತೆ.

ತಾರೀಖು ನೇ ಮೇ ಸ॥ 1890ನೇ ಇಸವಿ ಮೈಸೂರು.

ರುಜು ಕೇಶವಯ್ಯ.

ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದೂರವರಿಂದ ರಚಿಸಲ್ಪಟ್ಟ ಶ್ರೀಕೃಷ್ಣರಾಜ ವಾಣೀ ವಿಲಾಸವೆಂಬ ಮಹಾಭಾರತದ ಕನ್ನಡ ಟೀಕು.

ಆದಿ ಪರ್ವ ಮತ್ತು ಸಭಾ ಪರ್ವ.

ಈ ಉಭಯ ಪರ್ವಗಳೂ ಶ್ರೀಮನ್ಮಹಾರಾಜರವರಾದ ಚಾಮರಾಜೇಂದ್ರ ಒಡೆಯರ್ ಬಹದೂರವರ ಅಪ್ಪಣೆಯಂ ಪಡೆದು, ಶ್ರೀಮನ್ಮಹಾರಾಜರವರಿಂದ ಪರಿಶೋಷಿತರಾದ ಯಂ. ರುದ್ರಪ್ಪ ಅಂಡ್ ಸನ್ ಯವರಿಂದ, ಶ್ರೀ ಚಾಮುಂಡೇಶ್ವರಿ ಮುದ್ರಾಕ್ಷರ ಶಾಲೆಯಲ್ಲಿ ಛಾಪಿಸಲ್ಪಟ್ಟು, ಬೆಂಗಳೂರು ಲಾಲ್‌ಬಾಗ್ ರೋಡಿನಲ್ಲಿರುವ ಸದರೀ ಯವರ ಆಫಿಸಿನಲ್ಲಿ ವಿಕ್ರಯಿಸಲ್ಪಡುತ್ತವೆ. ಭೀಷ್ಮಪರ್ವ ಪ್ರಾರಂಭಿಸಿರುತ್ತೆ. ಆದಿಪರ್ವ ಕ್ರಯ ರೂ. 3—0—0 ಸಭಾಪರ್ವ ಕ್ರಯ ರೂ. 1—4—0.

ಪರಸ್ಥಳದವರು ಟಪ್ಪಾಲ್ ಹಾಸಲ್ ಸಹ ಕೊಡಬೇಕಾಗುತ್ತೆ. ಯಂ. ರುದ್ರಪ್ಪ ಅಂಡ್ ಸನ್,

ಪ್ರೊಪ್ರೈಟರ್ಸ್ ಶ್ರೀ ಚಾಮುಂಡೇಶ್ವರಿ ಪ್ರೆಸ್, ಲಾಲ್‌ಬಾಗ್ ರೋಡ್, ಬೆಂಗಳೂರು.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫಿಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಫೂರ್ಣಗಳು ತಗದುಕೊಳ್ಳುವಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಬಂದು ಫೂರ್ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 1—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಬಂದು ಫೂರ್‌ವುಳ್ಳ ಡಬ್ಬಿಗೆ 17 ರೂ. 8 ಆಣೆ, ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ, ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಬಂದು ಫೂರ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Govt. Central Press, Bangalore—1890.